

# ಈ ಕುಟುಂಬದಲ್ಲಿ ಎಲ್ಲರಿಗೂ ಆರಾರು ಬೆರಳು!




ಕುಟುಂಬದಲ್ಲಿ ಅಪರೂಪಕ್ಕೆ ಒಬ್ಬನಿಗೆ ಕಾಲಿನಲ್ಲೋ ಕೈಯಲ್ಲೋ ಆರನೆಯ ಬೆರಳು ಇರಬಹುದು. ಅದೂ ಕಿರು ಬೆರಳಿಗೆ ಅಂಟಿಕೊಂಡಂತೆ ಒಂದು ಚಿಕ್ಕ ಬೆರಳಿರುವುದು ಸಾಮಾನ್ಯ. ಈ ಬೆರಳು ಉಪಯೋಗಕ್ಕೆ ಬರುವುದಂತೂ ತೀರ ಕಡಮೆ. ಆದರೆ ಇಲ್ಲಿ ಹಾಗಲ್ಲ. ಇದು ಬ್ರೆಜಿಲ್ ದೇಶದ ರಾಜಧಾನಿ ಬ್ರೆಸಿಲಿಯಾ ಬಳಿಯ ಒಂದು ಹಳ್ಳಿಯಲ್ಲಿರುವ ಡಾ. ಸಿಲ್ವಾ ಕುಟುಂಬ. ಇದರಲ್ಲಿ ಹದಿನಾಲ್ಕು ಮಂದಿ ಸದಸ್ಯರಿದ್ದಾರೆ. ಇವರು ಎಲ್ಲರಿಗೂ ಕೈ ಮತ್ತು ಕಾಲುಗಳಲ್ಲಿ ಆರು ಬೆರಳುಗಳಿವೆ. ಆರನೆಯ ಬೆರಳು ಚಿಕ್ಕದಾಗಿರದೆ ಸಮಾನವಾಗಿಯೇ ಇದೆ.

ವೈದ್ಯಕೀಯ ಪರಿಭಾಷೆಯಲ್ಲಿ ಆನುವಂಶಿಕವಾಗಿ ಆರು ಬೆರಳಿರುವ ಸ್ಥಿತಿಗೆ 'ಪೊಲಿಡಾಕ್ಟಿಲಿ' ಎನ್ನುತ್ತಾರೆ. ವೈದ್ಯ ವಿಜ್ಞಾನದ ಅಪರೂಪದ ನೋಟ ಈ ಕುಟುಂಬದ್ದು. ಇವರಲ್ಲಿ ಮಹಿಳೆಯರು ಕಾಲಿನ ಹೆಚ್ಚುವರಿ ಬೆರಳುಗಳನ್ನು ಶಸ್ತ್ರಚಿಕಿತ್ಸೆಯ ಮೂಲಕ ತೆಗೆಸಿಕೊಂಡಿದ್ದಾರೆ. ಕಾರಣ ಆರು ಬೆರಳಿದ್ದರೆ ಕಾಲಿಗೆ ಬೂಟು ಹಾಕಲು ಆಗುವುದಿಲ್ಲವಂತೆ. ಕುಟುಂಬದ ಜೊವೋಡಿ ಆಸಿನ್ ಸಿಲ್ವಾ ಆರು ಬೆರಳುಗಳನ್ನು ಬಳಸಿ ಗಿಟಾರ್ ನುಡಿಸ ಬಲ್ಲವನಾದರೆ ಮೊರಿಯಾ ಮೊರೆನಾ ಸಿಲ್ವಾ ಪಿಯಾನೋ ನುಡಿಸುವುದರಲ್ಲಿ ಪಳಗಿದ್ದಾನೆ. ಬ್ರೆಜಿಲ್ ಸತತವಾಗಿ ಫುಟ್ಬಾಲ್‌ನಲ್ಲಿ ವಿಶ್ವಕಪ್ ಗೆಲ್ಲಲು ಹೆಚ್ಚುವರಿ ಬೆರಳುಗಳಿರುವ ತಮ್ಮಂಥ ಅದೃಷ್ಟಶಾಲಿಗಳು ಇಲ್ಲಿರುವುದೇ ಕಾರಣ ಎಂದು ದೃಢವಾಗಿ ಹೇಳುತ್ತಾರೆ ಡಾ. ಸಿಲ್ವಾ ಕುಟುಂಬದ ಸದಸ್ಯರು.

ಈಗ ಆ ಕುಟುಂಬದಲ್ಲಿ ಜನಿಸಿದ ಒಂದು ಮಗುವಿಗೆ ಸಾಮಾನ್ಯರಂತೆ ಐದು ಬೆರಳುಗಳಿವೆ. 'ಕುಟುಂಬದ ಪ್ರತಿಷ್ಠೆಗೆ ಧಕ್ಕೆ ತಂದಿರುವ ಮಗುವನ್ನು ಹೊರಗಿಡುವುದೇ ಯೋಗ್ಯವೆಂದು ನನಗೆ ಅನಿಸುತ್ತಿದೆ' ಎಂದು ಹೇಳುತ್ತಿದ್ದಾರೆ ಡಾ ಸಿಲ್ವಾ.

■ ಪ.ರಾಮಕೃಷ್ಣ ಶಾಸ್ತ್ರಿ